ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site:** www.cescmysore.org.
E-mail ID:gmhrd@cescmysore.org

Company Identity Number[CIN]:- U40109KA2004SGC035177

ಸಂಖ್ಯೆ : ಸೆಸ್ಕ್/ತರಬೇತಿ/03/13/2022-23/ 445-821 ದಿನಾಂಕ: 23 AUG 2022

## "ಅಧಿಕೃತ ಜ್ಞಾಪನ"

ವಿಷಯ : ಚಾವಿಸನಿನಿ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾರ್ಯಸ್ಥಳಗಳಿಗೆ 2022-23ನೇ ಸಾಲಿನ ಶಿಶಿಕ್ಷು ತರಬೇತಿಗೆ ಇಂಜಿನಿಯರಿಂಗ್/ಡಿಪ್ಲೋಮಾ ಶಿಶಿಕ್ಷುಗಳನ್ನು ನಿಯೋಜಿಸಿರುವ ಬಗ್ಗೆ. (ಒಂದು ವರ್ಷದ ತರಬೇತಿ)

ಉಲ್ಲೇಖ : ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ : ಸೆಸ್ಕ್/ತರಬೇತಿ/03/13/2022-23/10567 ದಿನಾಂಕ: 18.08.2022.

********

ಅಪ್ರೆಂಟಿಸ್ (ತಿದ್ದುಪಡಿ) ಕಾಯ್ದೆ 1973ರ ಅಡಿಯಲ್ಲಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಗಮ ನಿಯಮಿತದಲ್ಲಿ ದಿನಾಂಕ 01.09.2022 ರಿಂದ ಪ್ರಾರಂಭಗೊಳ್ಳುವ ಶಿಶಿಕ್ಷು ತರಬೇತಿಗೆ ಈ ಕೆಳಕಂಡ ಇಂಜಿನಿಯರಿಂಗ್ / ಡಿಪ್ಲೋಮಾ ಶಿಶಿಕ್ಷುಗಳನ್ನು ಒಂದು ವರ್ಷದ ಅವಧಿಯ ತರಬೇತಿಯನ್ನು ಪಡೆಯಲು ಉಲ್ಲೇಖದನ್ವಯ ನಿಯೋಜಿಸಲಾಗಿದೆ. ಶಿಶಿಕ್ಷುಗಳನ್ನು ನಿಯೋಜಿಸಿರುವ ಕಛೇರಿಗಳ ವಿವರಗಳು ಕೆಳಕಂಡಂತಿವೆ,

| Corporate Office | | | |
|---|---|---|---|
| **Sl.No.** | **Name** | **Qualification** | **Place of Apprenticeship** |
| 1 | Megha M T | BE-Civil | Civil Section, Corporate Office, Mysore. |
| 2 | Lingaraju M S | Diploma (Civil) | Civil Section, Corporate Office, Mysore. |

| Zonal Office | | | |
|---|---|---|---|
| **Sl.No.** | **Name** | **Qualification** | **Place of Apprenticeship** |
| 1 | D S Deekshith Kumar | BE-Civil | O&M Zonal Office, Mysore Zone |
| 2 | Shruthi | Diploma (Civil) | O&M Zonal Office, Mysore Zone |

| Mysore Circle | | | |
|---|---|---|---|
| **Sl.No.** | **Name** | **Qualification** | **Place of Apprenticeship** |
| 1 | Nandini.S | BE (E&E) | O&M Circle Office, Mysore |
| 2 | Harshitha V | BE-Civil | O&M Circle Office, Mysore |
| 3 | Sowmya B S | BE (E&E) | O&M Division Office, NR Mohalla |
| 4 | Yasmeen Godekar | BE (E&E) | O&M Division Office, VV Mohalla |
| 5 | Chinnaswamy R | BE-Civil | O&M Division Office, VV Mohalla |
| 6 | Thejaswi R S | BE (E&E) | O&M Division Office, Hunsur |
| 7 | B H Rachana | BE-Civil | O&M Division Office, KR Nagara |
| 8 | Usha P | BE (E&E) | O&M Division Office, Nanjangudu |
| 9 | Manukumara M | BE (E&E) | O& M Sub-Division, T. Narasipura |
| 10 | Thejaswini Reddy M | BE (E&E) | O&M Sub-Division, Chamundipuram |
| 11 | Swamy H C | BE (E&E) | O&M Sub-Division, Periyapatna |
| 12 | Bharatha | Diploma (E&E) | O&M Sub-division, Bannur |
| 13 | Ranjan. M | Diploma (E&E) | O&M Sub-Division, Varuna |

| Mandya Circle | | | |
|---|---|---|---|
| Sl.No. | Name | Qualification | Place of Apprenticeship |
| 1 | Shashikumar Shivanagi | BE-Civil | O&M Circle Office, Mandya |
| 2 | Abhishek K N | BE (E&E) | O&M Division Office, KR Pete |
| 3 | Santosh Lamani | BE-Civil | O&M Division Office, Maddur |
| 4 | Tejaswini H | BE (E&E) | O&M Division Office, Pandavapura |
| 5 | Vijayakumar J | BE-Civil | O&M Division Office, Pandavapura |

| Chamarajanagara-Kodagu Circle | | | |
|---|---|---|---|
| Sl.No. | Name | Qualification | Place of Apprenticeship |
| 1 | Sudarshan Kendhuli | BE (E&E) | O&M Circle Office, Chamarajanagara-Kodagu |
| 2 | Shreyas. M | BE-Civil | O&M Circle Office, Chamarajanagara-Kodagu |

| Hassan Circle | | | |
|---|---|---|---|
| Sl.No. | Name | Qualification | Place of Apprenticeship |
| 1 | Pavithra M | BE (E&E) | O&M Circle Office, Hassan |
| 2 | Sudarshan D S | Diploma (E&E) | O&M Circle Office, Hassan |
| 3 | Shobha | BE-Civil | O&M Circle Office, Hassan |
| 4 | Prasanna B R | Diploma (E&E) | O&M Division Office, Arasikere |

ಸದರಿ ತರಬೇತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ :

ಆಯ್ಕೆಗೊಂಡಿರುವ ಸದರಿ ಶಿಶಿಕ್ಷುಗಳಿಗೆ ದಿನಾಂಕ 01.09.2022 ರಂದು **"ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ) ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು"** ರವರಲ್ಲಿ ವರದಿಮಾಡಿಕೊಂಡು ತದನಂತರ, ದಿನಾಂಕ 02.09.2022ರಂದು ತರಬೇತಿಗೆ ನಿಯೋಜಿಸಿರುವ ಕಛೇರಿಗಳಲ್ಲಿ ವರದಿಮಾಡಿಕೊಳ್ಳಲು ಸೂಚಿಸಲಾಗಿದೆ. ನಿಯೋಜಿಸಿರುವ ಮೇಲ್ಕಂಡ ಅಭ್ಯರ್ಥಿಗಳು ಶಿಶಿಕ್ಷು ತರಬೇತಿಗೆ ದಿನಾಂಕ : 15.09.2022ರೊಳಗೆ ವರದಿ ಮಾಡಿಕೊಳ್ಳದೇ ಇದ್ದಲ್ಲಿ, ತರಬೇತಿಯನ್ನು ಪಡೆಯುವ ಸ್ವಇಚ್ಛೆ ಅಭ್ಯರ್ಥಿಗಳಿಗಿಲ್ಲವೆಂದು ಭಾವಿಸಲಾಗುವುದು ಮತ್ತು ನಿಯೋಜನೆಯು ಯಾವುದೇ ಮುನ್ಸೂಚನೆಯಿಲ್ಲದೆ ತಂತಾನೇ ರದ್ದಾಗಲಿದೆ. ಮುಂದುವರೆಯುತ್ತಾ,

1. ಪ್ರತಿಯೊಬ್ಬ ಶಿಶಿಕ್ಷು ಅಭ್ಯರ್ಥಿಯು ನಿಯೋಜಿಸಲಾದ ಕಛೇರಿಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಮಾಹಿತಿಯನ್ನು ಅವರುಗಳ ಮೇಲಾಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಈ ಕಛೇರಿಗೆ ಸಲ್ಲಿಸತಕ್ಕದ್ದು.
2. ಶಿಶಿಕ್ಷು ತರಬೇತಿಗೆ ಸೇರಿದ ಇಂಜಿನಿಯರಿಂಗ್ ಅಭ್ಯರ್ಥಿಗೆ ಪ್ರತಿ ತಿಂಗಳು **ರೂ. 9,000/-** ಹಾಗೂ ಡಿಪ್ಲೋಮಾ ಅಭ್ಯರ್ಥಿಗಳಿಗೆ ಪ್ರತಿ ತಿಂಗಳು **ರೂ. 8,000/-**ಗಳ **ಶಿಷ್ಯ ವೇತನವನ್ನು** ಚಾವಿಸನಿನಿ ವತಿಯಿಂದ ನೀಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳು ಸೂಕ್ತ ಕ್ರಮ ವಹಿಸುವುದು.
3. ಮಾಸಿಕ ಶಿಷ್ಯ ವೇತನವನ್ನು ಆಯೋಜಿಸಲು ಪ್ರತೀ ತಿಂಗಳ 5ನೇ ತಾರೀಖಿನ ಒಳಗೆ ಹಾಜರಾತಿ ಮತ್ತು ಮಾಸಿಕ ವರದಿಯನ್ನು ತಕ್ಷಣದ ಮೇಲಾಧಿಕಾರಿಗಳ ಸಹಿಯೊಂದಿಗೆ ಶಿಶಿಕ್ಷುಗಳು ಕಾರ್ಯನಿರ್ವಹಿಸುತ್ತಿರುವ ಕಛೇರಿಯ ಮುಖ್ಯಸ್ಥರಿಗೆ ಸಲ್ಲಿಸಿ ಒಂದು ಪ್ರತಿಯನ್ನು ಅಭ್ಯರ್ಥಿಗಳು ಅವರ ಬಳಿಯಲ್ಲಿ ಇಟ್ಟುಕೊಳ್ಳುವುದು. ಪ್ರತಿಯನ್ನು ತರಬೇತಿ ಶಾಖೆಯು ಕೋರಿದಲ್ಲಿ ಸಲ್ಲಿಸಬೇಕಾಗುತ್ತದೆ.
4. ಶಿಶಿಕ್ಷು ತರಬೇತಿ ಕಾಯ್ದೆ 1961ರ 15ನೇ ನಿಯಮದ ಪ್ರಕಾರ ಮತ್ತು ಶಿಶಿಕ್ಷು ತರಬೇತಿ ನಿಯಮ 1992ರ (ತಿದ್ದುಪಡಿ ನಿಯಮಗಳು 2003) 13ನೇ ಕಲಂನ ಪ್ರಕಾರ ತರಬೇತಿಯ ಅವಧಿಯಲ್ಲಿ ಒಬ್ಬ ಶಿಶಿಕ್ಷುವಿಗೆ ಚಾವಿಸನಿನಿಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಾನುಸಾರ **12 ಸಾಂದರ್ಭಿಕ ರಜೆಗಳನ್ನು** ಹಾಗೂ ನಿಗಮಕ್ಕೆ ಅನ್ವಯಿಸುವ ಸಾರ್ವತ್ರಿಕ ರಜೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಇದರೊಂದಿಗೆ ಪ್ರತಿ ತಿಂಗಳಲ್ಲಿ ಬರುವ 2ನೇ ಮತ್ತು 4ನೇ ಶನಿವಾರ ಮತ್ತು ಎಲ್ಲಾ ಭಾನುವಾರಗಳಂದು ರಜೆ ಇರುತ್ತದೆ.

5. ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಶಿಷ್ಯವೇತನವು ಕ್ರೋಢೀಕೃತ ಮೊತ್ತವಾಗಿದ್ದು ಸದರಿ ಮೊತ್ತವನ್ನು ಹೊರತುಪಡಿಸಿ ಇನ್ನಾವುದೇ ರೀತಿಯ ಪ್ರಯಾಣ ಭತ್ಯೆ, ತುಟ್ಟಿ ಭತ್ಯೆಯನ್ನು ಅಥವಾ ಇನ್ನಿತರೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ.
6. ಒಂದು ವೇಳೆ ಅಭ್ಯರ್ಥಿಯು ಶಿಶುಕ್ಷು ತರಬೇತಿಯನ್ನು ಸೂಕ್ತ ಕಾರಣವನ್ನು ತಿಳಿಸದೆ ಪೂರ್ಣಗೊಳಿಸದಿದ್ದಲ್ಲಿ, ತರಬೇತಿಯ ಪ್ರಾರಂಭದಿಂದ ಅಂತ್ಯದವರೆಗೆ ಪಡೆದ ಶಿಷ್ಯ ವೇತನವನ್ನು, ಚಾವಿಸನಿನಿಗೆ ಹಿಂದಿರುಗಿಸಬೇಕಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಅಭ್ಯರ್ಥಿಗಳು ಯಾವುದೇ ಇಲಾಖೆಯ/ ಸಂಸ್ಥೆಯ, ಮತ್ತೊಂದು ಶಿಶಿಕ್ಷು ತರಬೇತಿಯ ಒಪ್ಪಂದಕ್ಕೆ ಪ್ರವೇಶಿಸಲು ಅರ್ಹರಾಗಿರುವುದಿಲ್ಲ.
7. ಶಿಕ್ಷಣಾರ್ಥಿಗಳು ಶಿಷ್ಯ ವೇತನವನ್ನು ಪಡೆಯಲು ಬ್ಯಾಂಕಿನಲ್ಲಿ ಆಧಾರ್ ಲಿಂಕ್ ಹೊಂದಿರುವ **ಎಸ್.ಬಿ.** ಖಾತೆಯನ್ನು ಹೊಂದಿರತಕ್ಕದ್ದು.
8. ಈ ಕೆಳಕಂಡ ಸಂದರ್ಭಗಳಲ್ಲಿ ಮಾತ್ರ ಶಿಶಿಕ್ಷುಗಳು ಶಿಶುಕ್ಷು ತರಬೇತಿಯನ್ನು, ಶಿಷ್ಯ ವೇತನವನ್ನು ಮರುಪಾವತಿಸದೇ ಕೊನೆಗೊಳಿಸಬಹುದು.
   a) ಅವನು/ಅವಳು ಪೂರ್ಣಉದ್ಯೋಗವನ್ನು ಪಡೆದುಕೊಂಡಿದ್ದಲ್ಲಿ (ನೇಮಕಾತಿ ಆದೇಶದ ನಕಲು ಪ್ರತಿಯನ್ನು ನೀಡಬೇಕು)
   b) ವೈದ್ಯಕೀಯ ಕಾರಣಗಳಿಂದ ತರಬೇತಿಯನ್ನು ಮುಂದುವರೆಸಲು ಅವನು/ಅವಳು ಸಾಧ್ಯವಾಗದಿದ್ದಲ್ಲಿ. (ಸಿವಿಲ್ ಸರ್ಜನ್ ಶ್ರೇಣಿಯ ಮೇಲ್ಪಟ್ಟ ವೈದ್ಯಕೀಯ ಅಧಿಕಾರಿಗಳಿಂದ ಪ್ರಮಾಣ ಪತ್ರವನ್ನು ನೀಡಬೇಕು)
9. ***ಅಪ್ರೆಂಟಿಸ್ ತರಬೇತಿ ಅವಧಿಯ ಸಮಯದಲ್ಲಾಗಲಿ ಅಥವಾ ಮುಗಿದ ನಂತರವಾಗಲಿ ಶಿಶಿಕ್ಷುಗಳಿಗೆ ಚಾವಿಸನಿನಿಯಲ್ಲಿ ಯಾವುದೇ ಖಾಯಂ ಉದ್ಯೋಗ ನೀಡಬೇಕೆಂಬ ಯಾವುದೇ ನಿರ್ಬಂಧ (Obligation)ವು ಚಾವಿಸನಿನಿಗೆ ಇರುವುದಿಲ್ಲ. ಈ ನಿಟ್ಟಿನಲ್ಲಿ ಶಿಶಿಕ್ಷು ಅಭ್ಯರ್ಥಿಯು ಯಾವುದೇ ರೀತಿಯಾದ ತಗಾದೆ/ಹಕ್ಕೊತ್ತಾಯ/ಆಗ್ರಹವನ್ನು ಮಾಡುವಂತಿಲ್ಲ.***

ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಅನುಷ್ಠಾನಗೊಳಿಸಲು, ಸಂಬಂಧಪಟ್ಟ ಮೇಲಾಧಿಕಾರಿಗಳು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ.

**ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ)**
**ನಿಗಮ ಕಾರ್ಯಾಲಯ, ಚಾವಿಸನಿನಿ**
**ಮೈಸೂರು**

**ಪ್ರತಿಗಳು** :-

- ಮುಖ್ಯ ಇಂಜಿನಿಯರ್(ವಿ), ಕಾ & ಪಾ ವಲಯ, ಚಾವಿಸನಿನಿ, ಮೈಸೂರು/ಹಾಸನ ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
- ಪ್ರಧಾನ ವ್ಯವಸ್ಥಾಪಕರು, ಖರೀದಿ ಶಾಖೆ, ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
- ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು/ಮಂಡ್ಯ/ಚಾ.ನಗರ–ಕೊಡಗು ಮತ್ತು ಹಾಸನರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
- ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಎನ್.ಆರ್. ಮೊಹಲ್ಲಾ/ ವಿ.ವಿ. ಮೊಹಲ್ಲಾ/ ಹುಣಸೂರು/ ಕೆ.ಆರ್. ನಗರ/ ನಂಜನಗೂಡು/ ಕೆ.ಆರ್. ಪೇಟೆ/ ಮದ್ದೂರು/ ಪಾಂಡವಪುರ/ ಹಾಸನ/ ಅರಸೀಕೆರೆ, ಚಾವಿಸನಿನಿ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ.
- ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ, ತಿ. ನರಸೀಪುರ/ ಚಾಮುಂಡಿಪುರಂ/ ಪಿರಿಯಾಪಟ್ಟಣ/ ಬನ್ನೂರು/ ವರುಣ, ಚಾವಿಸನಿನಿ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಅಧಿಕಾರಿ ರವರ ಆಪ್ತ ಕಾರ್ಯದರ್ಶಿಯವರಿಗೆ ಅಧಿಕೃತ ಜ್ಞಾಪನಾ ಪತ್ರವನ್ನು ಕಳುಹಿಸುತ್ತಾ, ಪತ್ರದಲ್ಲಿನ ಅಂಶಗಳನ್ನು ಮಾನ್ಯ ವ್ಯ.ನಿ/ನಿ(ತಾಂ)/ಮು.ಆ.ಅ ರವರ ಗಮನಕ್ಕೆ ತರಲು ಕೋರಿದೆ.
- ಉಪ್ರವ್ಯ, MIS ಶಾಖೆ, ನಿಗಮ ಕಾರ್ಯಾಲಯ, ಮೈಸೂರವರ ಮಾಹಿತಿಗಾಗಿ & ನಿಗಮದ WEBSITE ನಲ್ಲಿ UPLOAD ಗಾಗಿ.
- ಕಛೇರಿ ಪ್ರತಿ/ಮು.ಕ.